OS No. 26/2016

PW-2

**(ಇಂದು ದಿಃ 21-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಮುಂದುವರೆದ ಪಾಟೀ ಸವಾಲುಃ- ಪ್ರತಿವಾದಿ ಪರ ಶ್ರೀ. ಎನ್ ಆರ್ ವಕೀಲರಿಂದಃ-**

ನಿಪಿ-7 ರಿಂದ 15 ದಾಖಲಾತಿಗಳು ಪ್ರತಿವಾದಿಯರು ಹಾಜರು ಪಡಿಸಿದ ದಾಖಲಾತಿಗಳು ಆಗಿವೆ ಎಂದರೆ ಇರಬಹುದು. ನಿಪಿ-12 ಮತ್ತು 14ಅನ್ನು ನಾನು ಈ ದಾವೆ ಸಲ್ಲಿಸುವ ವರೆಗೆ ಪ್ರಶ್ನೆ ಮಾಡಿರಲಿಲ್ಲ, ಸಾಬಣ್ಣ ಮತ್ತು ಕಾಶಪ್ಪರವರಿಗೆ ಸರ್ವೆ ನಂಬರ 738 ಜಮೀನು ಇತ್ತು ಎಂದರೆ ಸರಿ. ಸದರಿ ಜಮೀನು ಸಾಬಣ್ಣನ ಹೆಂಡತಿ ಮತ್ತು ಮಕ್ಕಳ ಹೆಸರಿಗೆ ಮುಟೇಷನ್ ಆಗಿದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಇವತ್ತೀಗೂ ಸದರಿ ಜಮೀನು ಸಾಬಣ್ಣನ ಹೆಸರಿನಲ್ಲಿದೆ ಎಂದು ಹೇಳುತ್ತಾರೆ. ಸರ್ವೆ ನಂಬರ 738 ದಿಃ 07-01-1991ರಂದು ಮುಟೇಷನ್ ನಂಬರ 57ರ ಮೂಲಕ ಸಾಬಣ್ಣನ ಹೆಂಡತಿ ಮತ್ತು ಮಗನ ಹೆಸರಿಗೆ ಆಗಿದೆ ಎಂದರೆ ಸರಿಯಲ್ಲ, ನನಗೆ ಎಲ್ಲಾ ಸಂಗತಿಗಳು ಗೊತ್ತಿದ್ದರು ಕೂಡಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ,

( ಪ್ರತಿವಾದಿ 5 (a) ರಿಂದ (d) ರವರ ಪರ ಶ್ರೀ ಬಿ ಎಸ್ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಅನುಮತಿ ಕೋರಿದ್ದು ನೀಡಲಾಯಿತು. )

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**

**ಸೇಡಂ.**

OS No. 26/2016

PW-2